ಕ್ಷೇತ್ರವಾರು ಬಿಡುಗಡೆಯಾಗಿರುವ ಅನುದಾನ

463 ಶ್ರೀ ರಮೇಶ್ ಬಂಡಿಸಿದ್ದೇಗೌಡ ಎ.ಬಿ. : ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಜರಾಯಿ ಇಲಾಖೆಯ ವತಿಯಿಂದ ರಾಜ್ಯದ ವಿಧಾನ ಸಭಾ ಕ್ಷೇತ್ರವಾರು ಬಿಡುಗಡೆಯಾಗಿರುವ ಅನುದಾನ ಎಷ್ಟು;

ಆ) ಮಂಡ್ಯ ಜಿಲ್ಲೆಯ ತಾಲ್ಲೂಕುವಾರು ಬಿಡುಗಡೆಯಾಗಿರುವ ಅನುದಾನ ಎಷ್ಟು;

ಇ) ಶ್ರೀರಂಗಪಟ್ಟಣ ವಿಧಾನ ಸಭಾ ಕ್ಷೇತ್ರಕ್ಕೆ ಬಿಡುಗಡೆಯಾಗಿರುವ ಅನುದಾನ ಎಷ್ಟು;

ಈ) ಈವರೆವಿಗೆ ಶ್ರೀರಂಗಪಟ್ಟಣ ವಿಧಾನ ಸಭಾ ಕ್ಷೇತ್ರದಲ್ಲಿ ಯಾವ ಯಾವ ದೇವಸ್ಥಾನಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ;

ಉ) ಪ್ರಸಕ್ತ ಸಾಲಿನಲ್ಲಿ ಶ್ರೀರಂಗಪಟ್ಟಣ ಕ್ಷೇತ್ರದಲ್ಲಿನ ಯಾವ ಮುಜರಾಯಿ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಸರ್ಕಾರ ಕ್ರಮ ಕೈಗೊಳ್ಳಲು ಉದ್ದೇಶಿಸಿದೆ, ಅವುಗಳಿಗೆ ಬಿಡುಗಡೆ ಮಾಡುವ ಅನುದಾನ ಎಷ್ಟು?

ಶ್ರೀ ವಿ.ಸೋಮಣ್ಣ (ವಸತಿ ಮತ್ತು ಮುಜರಾಯಿ ಸಚಿವರು) :

ಅ) 2008–09ನೇ ಸಾಲಿನಲ್ಲಿ ರೂ. 2217.26 ಲಕ್ಷ ಅನುದಾನವನ್ನು ಮಂಜೂರು ಮಾಡಿದೆ.

ಆ) 2008–09ನೇ ಸಾಲಿಗೆ ರೂ.172.25 ಲಕ್ಷ ಅನುದಾನವನ್ನು ಮಂಜೂರು ಮಾಡಿದೆ.

ಇ) ರೂ. 9.50 ಲಕ್ಷ ಮಂಜೂರು ಮಾಡಿದ ವಿವರ ಅನುಬಂಧದಲ್ಲಿ ಲಗತ್ತಿಸಿದೆ.

ಈ) ದೇವಸ್ಥಾನಗಳಿಗೆ ಬಿಡುಗಡೆ ಮಾಡಿದ ವಿವರ:–

ಕ್ರ. ಸಂ.	ಬಿಡುಗಡೆ ಮಾಡಲಾದ ದೇವಸ್ಥಾನಗಳ ಹೆಸರು	ಅನುದಾನದ ಮೊತ್ತ (ಲಕ್ಷ ರೂ.ಗಳಲ್ಲಿ)
1	ಶ್ರೀ ಆನಂದಾಳ್ವರ್ ಮತ್ತು ಶ್ರೀನಿವಾಸ ದೇವಸ್ಥಾನ, ಕಿರಂಗೂರು.	0.50
2	ಶ್ರೀ ಬಸವೇಶ್ವರ ದೇವಸ್ಥಾನ, ಬಸ್ತಿಪುರ.	0.25
3	ಶ್ರೀ ಕಾಶಿ ಚಂದ್ರಮೌಳೇಶ್ವರ ದೇವಸ್ಥಾನ, ಶ್ರೀ ಚಂದ್ರವನ ಆಶ್ರಮ, ಶ್ರೀರಂಗಪಟ್ಟಣ.	3.00
	ಒಟ್ಟು	**3.75**

ಉ) ದೇವಸ್ಥಾನಗಳ ವತಿಯಿಂದ ಜೀರ್ಣೋದ್ಧಾರ ಕಾಮಗಾರಿ ಕೈಗೊಳ್ಳಲು ಉದ್ದೇಶಿಸಿ ಸರ್ಕಾರದಿಂದ ಅನುದಾನ ಆಪೇಕ್ಷಿಸಿ ಸೂಕ್ತ ದ್ವಾರದ ಮೂಲಕ ಪ್ರಸ್ತಾವನೆಗಳು ಸರ್ಕಾರಕ್ಕೆ ಬಂದಲ್ಲಿ ಆಯವ್ಯಯದಲ್ಲಿ ಒದಗಿಸಿದ ಅನುದಾನದಲ್ಲಿ ಲಭ್ಯತೆಗನುಗುಣವಾಗಿ ಅನುದಾನ ಮಂಜೂರು ಮಾಡಲು ಪರಿಸೀಲಿಸಲಾಗುವುದು.

ಅನುಬಂಧ

ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ವಿಧಾನ ಸಭಾ ಕ್ಷೇತ್ರದ ದೇವಸ್ಥಾನಗಳಿಗೆ ಬಿಡುಗಡೆ ಮಾಡಲಾದ ಅನುದಾನದ ವಿವರ

ಕ್ರ. ಸಂ.	ದೇವಾಲಯದ ಹೆಸರು	ಗ್ರಾಮ	ಮಂಜೂರಾದ ಅನುದಾನ (ರೂ.ಲಕ್ಷಗಳಲ್ಲಿ)
1	ಶ್ರೀ ಆಂಜನೇಯಸ್ವಾಮಿ	ಹುಲ್ಲುಕೆರೆ	1.00
2	ಶ್ರೀ ಹಂಚಿದೇವಮ್ಮ	ಸೊನಗನಹಳ್ಳಿ	1.50
3	ಶ್ರೀ ಸಿದ್ಧೇಶ್ವರ	ಮೊತ್ತಹಳ್ಳಿ	0.50
4	ಶ್ರೀ ಬಸವೇಶ್ವರ ದೇವಸ್ಥಾನ	ಮೊತ್ತಹಳ್ಳಿ	0.50
5	ಶ್ರೀ ಆಂಜನೇಯಸ್ವಾಮಿ	ವಡೆಯಾಂಡಹಳ್ಳಿ	0.50
6	ಶ್ರೀ ಕಾವೇರಿ ಬೋರೇದೇವರ	ಮಂಡ್ಯಕೊಪ್ಪಲು	1.00
7	ಶ್ರೀ ಸಿದ್ಧಪ್ಪಾಜಿ	ಬಿದರಹಳ್ಳಿಹುಂಡಿ	0.50
8	ಶ್ರೀ ಉತ್ತೂರಮ್ಮ	ಚಿಕ್ಕಂಕನಹಳ್ಳಿ	1.00
9	ಶ್ರೀ ಬೀರಲಿಂಗೇಶ್ವರ	ಚನ್ನೇನಹಳ್ಳಿ	1.00
10	ಶ್ರೀ ಬಸವನಗುಡಿ	ಅರಕೆರೆ	1.00
11	ಶ್ರೀ ಶ್ರೀನಿವಾಸ	ಕರಿಘಟ್ಟ	1.00
		ಒಟ್ಟು	**9.50**

1149 ಶ್ರೀ ಸುಭಾಷ್ ಆರ್. ಗುತ್ತೇದಾರ್ (ಆಳಂದ್) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು, ಕಾಲೇಜುವಾರು ಮಾಹಿತಿ ನೀಡುವುದು);

ಆ) ಈ ಕಾಲೇಜುಗಳನ್ನು ಯಾವ ಯಾವ ವರ್ಷ ಮಂಜೂರು ಮಾಡಲಾಗಿದೆ ಹಾಗೂ ಕಳೆದ ಮೂರು ವರ್ಷಗಳಿಂದ ಮಂಜೂರಾದ ಸರ್ಕಾರಿ ಕಾಲೇಜುಗಳ ಸಂಖ್ಯೆ ಎಷ್ಟು;